ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯ ಪ್ರಮಾಣ

397: ಶ್ರೀ ಜಿ. ರಾಜುಗೌಡ (ಹನೂರು):– ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಎಷ್ಟು ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಧ್ಯವಿರುವುದು;

ಆ) 1992-93ನೇ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುತ್ ಬರವನ್ನು ಹೋಗಲಾಡಿಸಲು ನಿಗದಿಪಡಿಸಿದ ಹಣ ಎಷ್ಟು;

ಇ) ಇದರಲ್ಲಿ ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟೆಷ್ಟು ವೆಚ್ಚ ಮಾಡಲಾಗಿದೆ;

ಈ) ಖಾಸಗಿ ವಲಯಗಳ ಬಂಡವಾಳ ಹೂಡಿಕೆಯ ದೃಷ್ಟಿಯಿಂದ ಸರ್ಕಾರದ ಯಾವ ರೀತಿ ಎಷ್ಟರ ಮಟ್ಟಿಗೆ ಪ್ರಗತಿ ಸಾಧಿಸಿರುವುದು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ರಾಜ್ಯದಲ್ಲಿ ಒಟ್ಟು ವಿದ್ಯುತ್ ಉತ್ಪದನೆ ಸಾಧ್ಯತೆ 3122 ಮೆ.ವ್ಯಾ. ಇದರಲ್ಲಿ ಖಾಸಗಿ ವಲಯದ 18 ಮೆ.ವ್ಯಾ. ಉತ್ಪಾದನೆಯು ಸೇರಿರುತ್ತದೆ.

ಆ) 1992-93ನೇ ಸಾಲಿಗೆ ಒದಗಿಸಲಾಗಿರುವ ಮೊತ್ತ 355,01ಕೋಟಿ ರೂಪಾಯಿಗಳಾಗಿರುತ್ತದೆ.

ಇ) ವಿವಿಧ ಯೋಜನೆಗಳು ಆಗಿರುವ ಒಟ್ಟು ವೆಚ್ಚ 279.25 ಕೋಟಿ ರೂಪಾಯಿಗಳು.

ಈ) ಪ್ರಸ್ತುತದಲ್ಲಿ ಖಾಸಗಿ ವಲಯದಲ್ಲಿನ ಉತ್ಪಾದನಾ ಶಕ್ತಿ 18 ಮೆ. ವ್ಯಾ.

ಶ್ರೀ ಎಸ್.ಎಂ. ಕೃಷ್ಣ:– 'ಆ' ಉತ್ತರಕ್ಕೆ ಒಂದು ಸಣ್ಣ ತಿದ್ದುಪಡಿ ಇದೆ. ಇನ್ನೂ ನಾಲ್ಕು ಸಾವಿರ ಮೆಗವ್ಯಾಟ್ ಹೈಡಲ್ ಸಾಮರ್ಥ್ಯವನ್ನು ರಾಜ್ಯ ಹೊಂದಿದೆ.

ಶ್ರೀ ಜಿ. ರಾಜುಗೌಡ:– ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ತಾವು ವಿದ್ಯುತ್ ಉತ್ಪಾದನೆ 3122 ಮೆ.ವ್ಯಾ. ಎಂದು ಹೇಳಿದ್ದೀರಿ. ಎಷ್ಟು ಉತ್ಪಾದನೆ ಮಾಡುವುದಕ್ಕೆ ಈ ರಾಜ್ಯದಲ್ಲಿ ಅವಕಾಶವಿದೆ ಎನ್ನತಕ್ಕಂಥ ಒಂದು ಪ್ರಶ್ನೆ. ತಾವು ಹೊರ ರಾಜ್ಯದ ಎಷ್ಟು ವಿದ್ಯುತ್‌ನ್ನು ಪಡೆಯುತ್ತಿದ್ದೀರಿ ? ರಾಜ್ಯದಲ್ಲಿ ಎಷ್ಟು ಉತ್ಪಾದನೆ ಮಾಡಲಿಕ್ಕೆ ಅವಕಾಶವಿದೆ; ಮತ್ತು ಉತ್ಪಾದನೆ, ಬೇಡಿಕೆ ಮತ್ತು ವಿತರಣೆಗೆ ಏನು ಸಂಬಂಧವಿದೆ ? ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:– ಮಾನ್ಯ ಅಧ್ಯಕ್ಷರೇ, ನಾನು ಸದನಕ್ಕೆ ಆಗಿಂದಾಗ್ಗೆ ಹೇಳುತ್ತಿದ್ದೇನೆ, ನಮ್ಮ ಒಟ್ಟು ಅವೇಲೆಬಲ್ ಪವರ್ 47 ಲಕ್ಷ ಮಿಲಿಯನ್ ಯೂನಿಟ್ಸ್; ನಮಗೆ ಇವತ್ತು ಬೇಕಾಗಿರತಕ್ಕಂಥಾದ್ದು 57 ಲಕ್ಷ ಮಿಲಿಯನ್ ಯೂನಿಟ್ಸ್ ಎಂದು. ಉತ್ಪಾದನಾ ದೃಷ್ಟಿಯಿಂದ ಹೇಳುವುದಾದರೆ ಒಟ್ಟು 3,122 ಮೆಗವ್ಯಾಟ್ ನಮ್ಮ ವಿದ್ಯುತ್ ಉತ್ಪಾದನೆ. ಅದರಲ್ಲಿ ಕರ್ನಾಟಕ ವಿದ್ಯುತ್ ನಿಗಮ ಮತ್ತು ಕರ್ನಾಟಕ ವಿದ್ಯುತ್ ಮಂಡಲಿ ಇವೆರಡೂ ಸೇರಿವೆ. ಮತ್ತು ಇನ್ನೊಂದು ಖಾಸಗಿ ವಲಯದ 18 ಮೆಗವ್ಯಾಟ್ ಸೇರಿದೆ. ಇನ್ನು ಹೊರರಾಜ್ಯಗಳಲ್ಲಿ ನಾವು ಎಷ್ಟು ಪಡೆಯುತ್ತಿದ್ದೇವೆ ಎಂದರೆ ಸುಮಾರು 500 ರಿಂದ 600 ಮೆಗವ್ಯಾಟ್‌ನಷ್ಟು ವಿದ್ಯುತ್‌ನ್ನು ನಾವು ತರಿಸಿಕೊಳ್ಳುತ್ತಿದ್ದೇವೆ. ಅದೂ ಕೂಡ ಸಾಕಾಗುವುದಿಲ್ಲ.

ಶ್ರೀ ಜಿ. ರಾಜುಗೌಡ:– ತಾವು ಖಾಸಗೀ ವಲಯದಿಂದ ಸುಮಾರು 18 ಮೆಗವ್ಯಾಟ್ ವಿದ್ಯುತ್

ಉತ್ಪಾದನೆಯಾಗಿದೆ ಎಂದು ಹೇಳಿದಿರಿ. ಖಾಸಗೀ ವಲಯದಲ್ಲಿ ಉತ್ಪಾದನೆ ಮಾಡಿದಾಗ ಒಂದು ಕಿಲೋವ್ಯಾಟ್‌ಗೆ ಎಷ್ಟು ಖರ್ಚಾಗುತ್ತದೆ ?

ಶ್ರೀ ಎಸ್.ಎಂ. ಕೃಷ್ಣ:– ನನ್ನ ಹತ್ತಿರ ಕಿಲೋವ್ಯಾಟ್ ಬ್ರೇಕಪ್ ಇಲ್ಲ. ನನ್ನ ಹತ್ತಿರ ಮೆಗವ್ಯಾಟ್ ಬ್ರೇಕ್‌ಅಪ್ ಇದೆ. ಮಾನ್ಯ ರಾಜುಗೌಡರು ಕೇಳಿರತಕ್ಕಂತಹ ಪ್ರಶ್ನೆಗೆ ನನ್ನ ದೃಷ್ಟಿಯಲ್ಲಿ ಖಾಸಗೀ ವಲಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದರೂ ಒಂದೇ ಖರ್ಚು ಬರುತ್ತದೆ. ಆದರೆ ಸರ್ಕಾರಿ ವಲಯದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದರೆ ಅದು ತಡವಾದರೆ ಖರ್ಚು ಜಾಸ್ತಿಯಾಗಬಹುದು ಎನ್ನುವಂತಹ ಭಯ ನನಗೆ ಇದೆ. ಆದುದರಿಂದ ಖರ್ಚಿನಲ್ಲಿ ಏನೂ ಅಂತಹ ಹೆಚ್ಚುಕಡಿಮೆ ಬರುವುದಿಲ್ಲ. ನನ್ನ ಅಂದಾಜಿನ ಪ್ರಕಾರ ಒಂದು ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಆಗಬೇಕಾಗದರೆ ಕನಿಷ್ಠ 3 ಕೋಟಿಯಿಂದ ಮೂರುವರೆ ಕೋಟಿ ರೂಪಾಯಿಗಳು ಎಂದು ಅಂದಾಜು ಮಾಡಲಾಗಿದೆ. ಹೈಡಲ್ ಪವರ್ ಆದರೆ ಸ್ವಲ್ಪ ಚೀಪ್ ಆಗಬಹುದು. ಕಡಿಮೆ ವೆಚ್ಚದಲ್ಲಿ ಹೈಡಲ್ ಪವರ್ ಅನ್ನು ಮಾಡಬಹುದು.

ಶ್ರೀ ಜಿ. ರಾಜುಗೌಡ:– ಖಾಸಗೀ ವಲಯದಲ್ಲಿ ತಾವು ಉತ್ಪಾದನೆ ಮಾಡುವುದಕ್ಕೆ ತಮಗೆ ಇರತಕ್ಕಂಥಹ ತೊಂದರೆಗಳು ಏನು ? ಬಂಡವಾಳ ಹೂಡುವುದಕ್ಕೆ ತಮಗೆ ತೊಂದರೆ ಇದೆಯೇ ? ಹಾಗಿದ್ದ ಮೇಲೆ ವೆಚ್ಚ ಕಡಿಮೆಯಾಗುತ್ತದೆ ಎಂದು ತಮಗೆ ಅಭಿಪ್ರಾಯ ಬಂದಮೇಲೆ ತಾವು ಏಕೆ ಖಾಸಗೀ ವಲಯಕ್ಕೆ ಹೆಚ್ಚಿಗೆ ಉತ್ಪಾದನೆ ಮಾಡುವುದಕ್ಕೆ ಅವಕಾಶ ಮಾಡಬಾರದು ? ಇದರಿಂದ ತಮಗೆ ಇರತಕ್ಕಂತಹ ತೊಂದರೆ ಏನು ?

ಶ್ರೀ ಎಸ್.ಎಂ. ಕೃಷ್ಣ:– ಈಗ ನಮ್ಮ ಸರ್ಕಾರದಲ್ಲಿ ಸಂಪನ್ಮೂಲಗಳ ಕೊರತೆ ಇದೆ ಎನ್ನುವುದು ಎಲ್ಲರಿಗೂ ತಿಳಿದಿರತಕ್ಕಂತಹ ವಿಚಾರ. ಆದುದರಿಂದಲೇ ಕೇಂದ್ರ ಸರ್ಕಾರದವರು ಕೇಂದ್ರ ವಿದ್ಯುತ್ ಆಕ್ಟ್‌ನ್ನು ಬದಲಾವಣೆ ಮಾಡಿ, ಮೊಟ್ಟ ಮೊದಲನೆಯ ಬಾರಿಗೆ ಖಾಸಗಿ ಕ್ಷೇತ್ರದವರು ವಿದ್ಯುತ್ ಉತ್ಪಾದನೆಗೆ ಬರಬೇಕು ಎಂದು ಅವರಿಗೆ ಅವಕಾಶ ಕೊಟ್ಟಿರುವುದರ ಹಿನ್ನೆಲೆಯಲ್ಲಿ ಈಗಾಗಲೇ ನಾವು ಕೆಲವು ಖಾಸಗಿ ಸಂಸ್ಥೆಯವರ ಜೊತೆಯಲ್ಲಿ ನಾನಾ ಘಟ್ಟಗಳಲ್ಲಿ ಮಾತುಕತೆಗಳು ನಡೆಯುತ್ತಿವೆ. ಒಂದೆರಡು ಪ್ರಾಜೆಕ್ಟ್‌ಗಳು ಮಾತ್ರ ಅಂತಿಮ ಘಟ್ಟವನ್ನು ತಲುಪಿದೆ. ಆ ಅಂತಿಮ ಘಟ್ಟ ತಲುಪಿರತಕ್ಕಂಥಹ ಎರಡು ಪ್ರಾಜೆಕ್ಟಗಳ ಮೂಲಕ ಸುಮಾರು ಒಂದೂವರೆ ಸಾವಿರ ಮೆಗವ್ಯಾಟ್ ವಿದ್ಯುತ್ ಉತ್ಪಾದನೆ ಕೆಲಸ ನಮ್ಮ ರಾಜ್ಯದಲ್ಲಿ ಉಂಟಾಗುತ್ತದೆ ಎನ್ನುವಂತಹ ಆಸೆ ನನಗೆ ಇದೆ.

ಶ್ರೀ ಸಿ. ಬೈರೇಗೌಡ:– ಈ ಖಾಸಗಿ ರಂಗಕ್ಕೆ ಹೈಡ್ರೋ ಎಲೆಕ್ಟ್ರಿಕ್ ಪವರನ್ನು ಜನರೇಟ್ ಮಾಡತಕ್ಕಂಥ ಅವಕಾಶವನ್ನು ತಾವು ಒದಗಿಸಿಕೊಡುತ್ತೀರಿ ಎನ್ನುವಂಥ ಮಾತನ್ನು ಹೇಳುತ್ತಿದ್ದೀರಿ. ಯಾವ್ಯಾವ ಯೋಜನೆಗಳನ್ನು ಖಾಸಗೀ ವಲಯಕ್ಕೆ ವಹಿಸಬೇಕು ಎನ್ನುವಂಥ ಆಲೋಚನೆಯನ್ನು ತಾವು ಮಾಡಿದ್ದೀರಿ ? ಮತ್ತು ಎಷ್ಟು ಪ್ರಮಾಣದ ವಿದ್ಯುತ್‌ಅನ್ನು ಅವರು ಉತ್ಪಾದನೆ ಮಾಡಬೇಕು ಎನ್ನುವುದನ್ನು ಏನಾದರೂ ತಾವು ಅಂದಾಜು ಮಾಡಿದ್ದೀರಾ ? ಈ ಯೋಜನೆಗಳನ್ನು ಕಾಲಬದ್ಧವಾಗಿ ಮುಗಿಸಬೇಕು ಎನ್ನುವುದಕ್ಕೆ ಖಾಸಗಿಯವರಿಗೆ ಏನಾದರೂ ನಿರ್ದೇಶನ ಕೊಡುತ್ತೀರಾ ?

ಶ್ರೀ ಎಸ್.ಎಂ. ಕೃಷ್ಣ:– ಈಗಾಗಲೇ ಸಚಿವ ಸಂಪುಟ ತೆಗೆದುಕೊಂಡಿರುವ ನಿರ್ಧಾರದ ಪ್ರಕಾರ ಈ ಜಲ ವಿದ್ಯುತ್ ಯೋಜನಾ ಉತ್ಪಾದನೆಯನ್ನು ಸಾರ್ವಜನಿಕ ಕ್ಷೇತ್ರಕ್ಕೆ ಮೀಸಲಾಗಿಡಬೇಕು. ಮತ್ತು ಈ ಥರ್ಮಲ್ ಮತ್ತಿತರ ವಿದ್ಯುತ್ ಉತ್ಪಾದನಾ ಕ್ಷೇತ್ರಗಳನ್ನು ಖಾಸಗೀ ಕ್ಷೇತ್ರಕ್ಕೆ ಕೊಡಬೇಕು ಎನ್ನುವಂತಹ ನೀತಿಯನ್ನು ಈಗಾಗಲೇ ಸರ್ಕಾರ ರೂಪಿಸಿಕೊಂಡಿದೆ. ಈ ನೀತಿಯ ಹಿನ್ನೆಲೆಯಲ್ಲಿ ಎಷ್ಟು ಹಣ ಕರ್ನಾಟಕ ವಿದ್ಯುತ್ ನಿಗಮ ಇದಕ್ಕೆ ತೆರಬೇಕು ಎನ್ನುವುದರ ಬಗ್ಗೆ ಈಗ ನಾವು ಅಂದಾಜನ್ನು ಸಿದ್ಧಪಡಿಸುತ್ತಿದ್ದೇವೆ. ಅದು ಸಿದ್ಧವಾದ ಕೂಡಲೇ ಎಷ್ಟು ಹಣ ಬೇಕಾಗುತ್ತದೆ. ಮತ್ತು

ಅಷ್ಟು ಹಣವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಕೂಡ ಈ ಸಭೆಯ ಗಮನಕ್ಕೆ ತಂದು ಅದರ ಜೊತೆಯಲ್ಲಿ ನನ್ನ ಚಿಂತನೆಯನ್ನು ಹಂಚಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಮುದ್ರ ಕೊರೆತ ತಡೆಗಟ್ಟಲು ಕ್ರಮ

1953: ಶ್ರೀ ಜಿ.ಎಸ್. ಆಚಾರ್ (ಬೈಂದೂರು):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 1991-92, 1992-93ನೇ ವರ್ಷಗಳಲ್ಲಿ ಸಮುದ್ರ ಕೊರೆತದಿಂದ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳಾವುವು, ಅದಕ್ಕೆ ತಗುಲಿದ ವೆಚ್ಚವೆಷ್ಟು;

ಆ) ಅವುಗಳಲ್ಲಿ ಅಪೂರ್ಣವಾದವು ಎಷ್ಟು ? ಪೂರ್ಣಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುತ್ತದೆ;

ಇ) 1993-94ರಲ್ಲಿ ಯಾವ ಯಾವ ಸಮುದ್ರ ಕೊರೆತ ಮಾಡಿಸಲಾಗುವ ಕಾಮಗಾರಿಗಳೆಷ್ಟು ? ಅವು ಯಾವುವು ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 1991-92ರಲ್ಲಿ ಯಾವ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. 1992-93ರಲ್ಲಿ 5 ಕಾಮಗಾರಿಗಳನ್ನು ಕೈಗೊಂಡಿದ್ದು ವಿವರವನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.

ಆ) ಕೈಗೊಂಡಿರುವ ಎಲ್ಲ 5 ಕಾಮಗಾರಿಗಳು ಪ್ರಗತಿಯಲ್ಲಿವೆ ಮತ್ತು ಮುಂಬರುವ ಮಳೆಗಾಲದೊಳಗೆ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಇ) ಸಮುದ್ರ ಕೊರೆತ ಮಾಡಿಸುವ ಕಾಮಗಾರಿಗಳು ಯಾವುದೂ ಇಲ್ಲ. ಆದರೆ ಸಮುದ್ರ ಕೊರೆತ ತಡೆಗೋಡೆ ನಿರ್ಮಿಸುವ 7 ಕಾಮಗಾರಿಗಳನ್ನು ಉದ್ದೇಶಿಸಲಾಗಿದೆ. ವಿವರಗಳನ್ನು ಅನುಬಂಧ ಬಿ ನಲ್ಲಿ ನೀಡಲಾಗಿದೆ.